ತಾರೀಖು 30ನೇ ಏಪ್ರೆಲ್ 1885.

ಇದರಿಂದ ಸಮಸ್ತಜನಗಳಿಗೂ ತಿಳಿಸಲ್ಪಡುವದೇನಂದರೆ, ಚಿಕ್ಕಬಳ್ಳಾಪುರ ತಾಲ್ಲೂಕು ಬಾಬತು 1885—86ನೇ ಪಾರ್ಥಿವ 1886–87ನೇ ವ್ಯಯ ಮತ್ತು 1887–88ನೇ ಸರ್ವಜಿತು ಈ 3 ಸಾಲ್‌ಗಳ ಲಾಖ ಇಜಾರೆಯು, 1885ನೇ ಇಸವಿ ಜೂ 10ನೇ ತಾರೀಖಿನಲ್ಲಿ ಆ ತಾಲ್ಲೂಕು ಕಚೇರಿಯಲ್ಲಿ ಅಮಲ್ದಾರ್‌ರವರ ರೂಬರೂ ಬಹಿರಂಗವಾಗಿ ಸಾಲ್‌ವಾರ್ ಹರಾಜು ಮಾಡಲ್ಪಡುವದು, ಹರಾಜ್ ಬೆವಿ 11 ಘಂಟೆಗೆ ಆರಂಭವಾಗಿ ಸಾಯಂಕಾಲ 6 ಘಂಟೆಗೆ ಖೈದ ಮಾಡಲ್ಪಡುವದು.

ಹರಾಜ್ ಖೈದಾದ ಕೂಡ್ಲೆ ಚಡ ಸವಾಲ್‌ದಾರನು ತನ್ನ ಸವಾಲ್ ಮೊಬಲಗು ಪೈಕೀ ಕೇಕಡಾ 25 ರೂಪಾಯಿಗಳ ಪ್ರಕಾರ ಠೇವಣಿ ಯಿಡಬೇಕು, ಹರಾಜ್ ಡಿಪ್ಯೂಟಿ ಕಮ್ಮಿಷನರ್ ಸಾಹೆಬರವರಿಂದ ಮಂಜೂರ್ಮಾಡಲ್ಪಟ್ಟ ಸಂಗತಿ ಅವನಿಗೆ ಲಿಖಿತ ಮೂಲಕವಾಗಿ ತಿಳಿಸಲ್ಪಟ್ಟ ಲಾಗಾಯತು 15 ದಿವಸಗಳ ಒಳಗಾಗಿ ಬಾಕೀ ಮೊಬಲಗನ್ನು ಪಾವತೀ ಮಾಡಿ ಕ್ರಮಪ್ರಕಾರ ಸ್ಟ್ಯಾಂಪು ಕಾಗದದಲ್ಲಿ ಇಜಾರೆ ಮುಚ್ಚಲಿಕೆಯನ್ನು ಬರೆದುಕೊಡಬೇಕು.

ಮೇಲ್ಕಂಡ ಪರತ್ತುಗಳ ಪೈಕೀ ಯಾವದಕ್ಕೆ ಚಡ ಸವಾಲ್‌ದಾರ ತಪ್ಪುದಾಗ್ಯೂ ಈ ಬಾಬು ಪುನಹ ಹರಾಜ್ ಮಾಡಲ್ಪಟ್ಟು ಆದರಲ್ಲಿ ಲುಕ್ಸಾನು ಉಂಟಾದರೆ ಆ ಲುಕ್ಸಾನನು ಮೊಬಲಗು ಮೊದಲು ಚಡ ಸವಾಲ್‌ದಾರನಿಂದ ರೆವಿನ್ಯೂ ಕಂದಾಯದಂತೆ ವಸೂಲ್ಮಾಡಲ್ಪಡುತ್ತೆ.

ಸಿ. ಸುಬ್ಬರಾವ್,
ಡಿಪ್ಯೂಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ತಾರೀಖು 21ನೇ ಏಪ್ರೆಲ್ 1885.

ಇದರಿಂದ ನೋಟೀಸ್ ಕೊಡುವದೇನಂದರೆ, ಮೈಸೂರು ಡಿಸ್ಟ್ರಿಕ್ಟಿನಲ್ಲಿ ಹಿಡುವಳಿಯಲ್ಲಿಯಿಲ್ಲದೆ, ಕಂದಾಯ ಮೊಕರ್ರಾಜಲ್ಸಟ್ಟು ಮತ್ತು ಕಂದಾಯ ಮೊಕರರಾಗದೆ ಇರುವ ತಮೂಂ ಜಮೀನ್‌ಗಳು, ಗ್ರಾಮ ಬೇಲಿಗಳು, ಅಮರಾಯಿ, ಮತ್ತು ಅಮರಾಯಿ ಜೇತಿಗಳು ಇವುಗಳನ್ನು ಆಡಗಿರುವ ಡಿಸ್ಟ್ರಿಕ್ಟು ಫಾರೆಸ್ಟುಗಳ ಉತ್ಪತ್ತಿ ಬಾಬತು ಪಸಾರಿ ಜಿನಸುಗಳನ್ನು 1886ನೇ ಇಸವಿ ಮಾರ್ಚಿ 31ನೇ ಮಕ್ಕುಂವರಿಗೆ ಜವಾಯಿಸುವ ಹಕ್ಕುದಾರಿಯು, ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ಸ್ ವ ಗವರ್ಮೆಂಟು ಫಾರಂಗಳ ಸೂಪರ್‌ಟೆಂಡೆಂಟರಿಂದ ಅವರ ಆಫೀಸಿನೊಳಗೆ 1885ನೇ ಇಸವಿ ಜೂ 15ನೇ ಮಕ್ಕುಂ ಮಧ್ಯಾನ್ಹದಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು.

ತಾಲ್ಲೂಕು.	ಜಿನಸುಗಳ ವಿವರ.
ಮೈಸೂರು ಹೆಗ್ಗಡದೇವನಕೋಟೆ ಹುಣಸೂರು ಗುಂಡ್ಲುಪೇಟೆ ನಂಜನಗೂಡು ಚಾಮರಾಜನಗರ ಮಳವಳ್ಳಿಸಹಿತ ತಿರಮಕೂಡ್ಲು ನರಸೀಪುರ ಮಂಡ್ಯ ಶ್ರೀರಂಗಪಟ್ಟಣ ಮಡತೊರೆ	1. ಅಳಲೆಕಾಯಿ, 2 ತಾರೆಕಾಯಿ, 3 ಸೀಗೆಕಾಯಿ, 4 ಅಂಟುವಾಳದಕಾಯಿ, 5 ದಿಂಡುಗದ ಗೋಂದು, 6 ಕಾಡರಸಿನ, 7 ಜೇನುಮೇಣ ಮತ್ತು ಜೇನುತುಪ್ಪ, 8 ಅರಗು, 9 ಕಪಿಲಾರಂಗು, 10 ಪಚ್ಚಿಜಿಕ್ಕೆ, 11 ಪತಂಗ, 12 ಮಡ್ಡಿ, 13 ಬಿಳ್ಳದಬೀಜ, 14 ಚಗಚೆಬೀಜ, 15 ಹೊಂಗೆಬೀಜ, 16 ಗೇರುಬೀಜ, 17 ಹಾಲು ಮಡ್ಡಿ, 18 ಆವರಿಕೆಮೇಣ, 19 ಜೆಂಕೆಕೊಂಬು, 20 ಗುಗ್ಗಲ, ಇವು ವಗೈರೆ.

2. ಇಜಾರೆದಾರರಿಗೆ ಹಿಡುವಳಿ ಜವಿರ್, ಮತ್ತು ಸ್ವಂತ ಅಮರಾಯಿಗಳಲ್ಲಿ ಇರುವ ಗಿಡಗಳ ಫಸಲ್‌ಗಳಿಗೆ ಹಕ್ಕು ಇರವಿಲ್ಲವು.
3. ಮೇಲೆ ನಮೂದಿಸಲ್ಪಟ್ಟ ಜಿನಸುಗಳಲ್ಲಿ ಗ್ರಾಮ ಅಮರಾಯಿ ಬಾಬತು ಫಲಫಸಲುಗಳು ಅಡಗಿ ಇರುವದಿಲ್ಲವು.

4. ಚಡ ದರಖಾಸ್ತುದಾರನು ಕೂಡ್ಲೆ ಹರಾಜು ಮೊಬಲಗು ಪೈಕಿ ಶೇಕಡಾ 25ರ ಮೇರಿಗೆ ಕೇವಣಿ ಇಡತಕ್ಕದ್ದಲ್ಲದೆ, ಬಾಕಿ ಮೊಬಲಗನ್ನು ಡಿಸ್ಟ್ರಿಕ್ಟ್ ಯಾ ತಾಲ್ಲೂಕು ಖಜಾನೆಯೊಳಗೆ ಮೂರು ಸಮನಾದ ಖಿಸ್ತುಗಳಾಗಿ ಅಂದರೆ 1885ನೇ ಇಸವಿ ಅಕ್ಟೋಬರ್, ನವಂಬರ್ ಮತ್ತು ಡಿಸಂಬರ್ ಮಾಹೆಗಳ ಗುರ್ತೇ ತಾರೀಖುಗಳಲ್ಲಿ ಪಾವತಿ ಮಾಡತಕ್ಕದ್ದು.

5. ಇಜಾರೆದಾರನು ಯಾವದಾದರೂ ಖಿಸ್ತನ್ನು, ಆದು ಬಾಕಿ ಆದಾಗ, ಪಾವತಿಮಾಡಲಿಕ್ಕೆ ತಪ್ಪಿದರೆ, 1886ನೇ ಇಸವಿ ಮಾರ್ಚಿ 31ನೇ ಮಕ್ತುಂವರಿಗಿನ ಸುಲೆ ಪೈಕಿ ಉಳಿದ ಕಾಲದ ಪರಿಯಂತ ಸದರೀ ಪಸಾರೆಜಿನಸುಗಳನ್ನು ಜಮಾಯಿಸುವ ಹಕ್ಕುದಾರಿಯು ಫಾರೆಸ್ಟು ಇಲಾಖೆಯಿಂದ ಮರಳಿ ಹರಾಜು ಹಾಕಲ್ಪಟ್ಟು, ಅವಮಾನೀಯಲ್ಲಿ ಕೆಲಸ ನಡಿಸಲ್ಪಡುವದು. ಪರಂತು ಖಿಸ್ತು ಪಾವತಿ ಮಾಡಲಿಕ್ಕೆ ತಪ್ಪಿದ ಇಜಾರೆದಾರನು ಅದರಿಂದ ಸಂಭವಿಸುವ ಲುಕ್ಸಾನಿಗೆ ಗುರಿಯಾಗತಕ್ಕದ್ದು.

6. ಇಜಾರೆಮಾಡಿಕೊಳ್ಳಲು ಅಪೇಕ್ಷಿಸುವ ಜನಗಳಿಗೆ ಯಾವದಾದರೂ ಸಂಗತಿಗಳು ತಿಳಿಯಬೇಕಾಗಿದ್ದರೆ, ಅವರು ಹರಾಜ್ ತಾರೀಖಿಗೆ ಮದಲು ಸೂಪರ್‌ಟೆಂಡೆಂಟರ ಆಫೀಸಿನೊಳಗೆ ರೂಬರೂ ಕೇಳಿದಲ್ಲಿ, ಫಾರೆಸ್ಟು ಸೂಪರ್‌ಟೆಂಡೆಂಟರು ತಿಳಿಸುವರು.

ಶಿ. ಇ. ಯಂ. ರನಲ್, ಎಂ. ಆರ್. ಸಿ.,
ಫಾರೆಸ್ಟ್ ವ ಗವರ್ನ್‌ಮೆಂಟ್ ಫಾರಂಗಳ ಸೂಪರ್‌ಟೆಂಡೆಂಟ್.

ನಂ 2. ತಾರೀಖು 24ನೇ ಏಪ್ರಿಲ್ 1885.

ಹೆಗ್ಗಡದೇವನಕೋಟೆ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸುವ ದಸ್ತೈವಜನ್ನ ಕ್ರಮವಾದ ವಾರನದಾರನಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು. ತಪ್ಪಿದಲ್ಲಿ 1877ನೇ ಇಸವಿ 3ನೇ ನಂಬರು ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ನಾಶಮಾಡಲ್ಪಡುತ್ತೆ.

ನಂಬರ್.	ದಸ್ತಾವೇಜು ಬರದುಕೊಟ್ಟವನ ಹೆಸರು ಮತ್ತು ವಾಸಸ್ಥಳ.	ಬರಸಿ ಕೊಂಡವನ ಹೆಸರು ಮತ್ತು ವಾಸಸ್ಥಳ	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಿಯ ತಾರೀಖು.	ದಸ್ತಾವೇಜಿನ ಸ್ವಭಾವ ವ ಕಿಮ್ಮತ್ತು.
81	ಹೆಗ್ಗಡದೇವನಕೋಟೆ ತಾಲ್ಲೂಕು ಮಟ್ಟಿಕೆರೆಲಿರುವ ತೆಲಗುಬಣಜಿಗರ ಜಾತಿನೂಳೇರ ತಿಮ್ಮನ ಮಗ ವೆಂಕಟರಮಣ.	ಹೆಗ್ಗಡದೇವನಕೋಟೆ ತಾಲ್ಲೂಕು ಸರಗೂರಿನಲ್ಲಿ ಇರುವ ತೆಲಗುಬಣಜಿಗರ ಜಾತಿ ಕಾಳಮ್ಮನ ಮಗ ಪೋಲಿಸ್‌ಜವಾನ ವೆಂಕಟರಾಮಯ್ಯ	12—1—83	12—1—83	(50) ರೂಪಾಯಿನ ಜಮ್ರ್ಮಾ ಕ್ರಯ ಪತ್ರ.
82—83					

ಅಬ್ದುಲ್‌ಖಾದರ್, ಕೆ. ಬಿ.,
ರಿಜಿಸ್ಟ್ರಾರ್.

ಶಿವಮೊಗ್ಗಾ ಡಿಸ್ಟ್ರಿಕ್ಟ್.

ತಾರೀಖು 17ನೇ ಏಪ್ರಿಲ್ 1885.

ಇದರಿಂದ ಪ್ರಕಟಿಸಲ್ಪಡುವದೇನಂದರೆ, ಶಿವಮೊಗ್ಗಾ ವ ಕಡೂರು ಡಿಸ್ಟ್ರಿಕ್ಟುಗಳ ಉತ್ಪತ್ತೀ ಬಾಬತು ಇದರಡಿ ಕಂಡ ನಾಟಾಗಳು ಫಾರೆಸ್ಟು ಅಸಿಸ್ಟೆಂಟ್ ಕಂಜರ್‌ವೇಟರವರಿಂದ ಈ ಕೆಳಗೆ ನಮೂದಾದ ಸ್ಥಳಗಳಲ್ಲೂ ತಾರೀಖುಗಳಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.